

ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಸಂಸ್ಥಾಪನಾಚಾರ್ಯ

**ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ**

**1-6 ಫೆಬ್ರುವರಿ 2019, ಸುತ್ತೂರು ಶ್ರೀಕ್ಷೇತ್ರ, ಮೈಸೂರು ಜಿಲ್ಲೆ**

**ಕೃಷಿ ಮೇಳ 2019**

# ವರದಿ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ ಕೃಷಿಮೇಳವು ದಿನಾಂಕ 1 ರಿಂದ 6 ಫೆಬ್ರವರಿ 2019ರವರೆಗೆ ಶ್ರೀಕ್ಷೇತ್ರ ಸುತ್ತೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಕೃಷಿಮೇಳದ ಅಂಗವಾಗಿ ಜೆಎಸ್ಎಸ್ ಶಾಲಾ ಆವರಣದಲ್ಲಿ 3 ಎಕರೆ ಪ್ರದೇಶದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆಗಳು, ಒಂದು ಎಕರೆಯಲ್ಲಿ ಕೃಷಿ ಬ್ರಹ್ಮಾಂಡ ಮತ್ತು ಕೃಷಿ ವಸ್ತುಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ದೇಸಿ ಹಸು, ಕುರಿ, ಮೇಕೆ ಹಾಗೂ ಅಲಂಕಾರಿಕ ಮೀನುಗಳ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿತ್ತು. ದಿನಾಂಕ 01.02.2019 ರಂದು ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ, ಆದಿಚುಂಚನಗಿರಿ ಮಠಾಧೀಶರಾದ ಡಾ. ಶ್ರೀ ನಿರ್ಮಾಲಾನಂದನಾಥ ಸ್ವಾಮಿಜಿಯವರು ಕೃಷಿಮೇಳಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ಶ್ರೀ ಹೆಚ್.ಎಸ್. ಸೋಮಶೇಖರ್, ಶ್ರೀ ಎಸ್.ಎ. ಚಿನ್ನೇಗೌಡ, ಮಠಾಧೀಶರುಗಳು, ವಿಜ್ಞಾನಿಗಳು ಹಾಗೂ ಗಣ್ಯರುಗಳ ಉಪಸ್ಥಿತರಿದ್ದರು.

ಸಣ್ಣ, ಅತಿ ಸಣ್ಣ ರೈತರು ಜಲಾನಯನ ತತ್ವಗಳು ಮತ್ತು ಸುಧಾರಿತ ಬೇಸಾಯ ಕ್ರಮಗಳನ್ನು ಅನುಸರಿಸಿ ಸ್ವಾವಲಂಬಿ ಬದುಕಿಗಾಗಿ ಹೆಚ್ಚು ಖರ್ಚಿಲ್ಲದೆ ನಿರ್ಮಿಸಬಹುದಾದ ಸಮಗ್ರ ಕೃಷಿ ಮಾದರಿ – ಒಂದು ಎಕರೆಯಲ್ಲಿ **'ಕೃಷಿ ಬ್ರಹ್ಮಾಂಡ'ವು–** ಪ್ರತಿವರ್ಷದಂತೆ ಈ ಸಾಲಿನಲ್ಲೂ ವಿಶೇಷವಾಗಿ ಗಮನ ಸೆಳೆಯಿತು. ಈ ಪ್ರಾತ್ಯಕ್ಷಿಕೆಯಲ್ಲಿ 112 ವಿವಿಧ ಬೆಳೆಗಳು ಮತ್ತು ಕೃಷಿ ಉಪಕಸುಬುಗಳನ್ನು ಕಾಣಬಹುದಾಗಿತ್ತು. ವಿದೇಶಿ ಸೂಪರ್ ಫುಡ್ ಬೆಳೆಗಳಾದ ಟೆಫ್, ಚಿಯಾ ಮತ್ತು ಕ್ವಿನೋವ ಅಲ್ಲದೇ, ದೇಸಿ ಸೂಪರ್ ಫುಡ್ ಬೆಳೆಗಳಾದ 'ಸಿರಿಧಾನ್ಯಗಳು'; ಸಾಮೆ, ನವಣೆ, ಬರಗು, ಊದಲು ಮತ್ತು ರಾಗಿಯನ್ನು ಬೆಳೆಯಲಾಗಿತ್ತು. ಇದಲ್ಲದೆ, 60 ವಿವಿಧ ಹೂವು–ಹಣ್ಣು–ತರಕಾರಿ ಬೆಳೆಗಳನ್ನೊಳಗೊಂಡ ತೋಟಗಾರಿಕೆ ಬೆಳೆ ಪ್ರಾತ್ಯಕ್ಷಿಕೆಗಳು, 10 ಮೇವಿನ ಬೆಳೆಗಳು ಒಟ್ಟು 160 ವಿವಿಧ ಬೆಳೆಗಳು ವೀಕ್ಷಕರ ಗಮನಸೆಳೆದವು. ಈ ಬಾರಿ ಮೈಸೂರಿನ ಪಾರಂಪರಿಕ ಬೆಳೆಗಳಾದ  ನಂಜನಗೂಡು ರಸಬಾಳೆ, ಮೈಸೂರು ಮಲ್ಲಿಗೆ, ಮೈಸೂರು ಚಿಗುರೆಲೆ ಮತ್ತು ಈರನಗೆರೆ ಬದನೆಯನ್ನು ಪ್ರದರ್ಶಿಸಲಾಯಿತು.

ಪಶು ಸಂಗೋಪನೆ ಪ್ರದರ್ಶನದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ರೈತರು ತಮ್ಮಲ್ಲಿರುವ ವಿಶಿಷ್ಟ ತಳಿಗಳನ್ನು ಪ್ರದರ್ಶಿಸಿದರು. ಹಸುವಿನ ತಳಿಗಳಾದ ದೇವಣಿ, ಓಂಗೋಲ್, ಅಮೃತ್ ಮಹಲ್, ಸಾಹಿವಾಲ್, ಗಿರ್, ಹಾಗೂ ಹಳ್ಳಿಕಾರ್ ತಳಿಗಳು, ಹಾಗೂ ಬೀಟಲ್, ಜಲವಾಡಿ, ಬಾರ್ಬರಿ ಮೇಕೆ ತಳಿಗಳು ಹಾಗೂ ಬಂಡೂರು ಕುರಿ ತಳಿಗಳು, ಕೃಷಿ ಹೊಂಡದಲ್ಲಿ ಅಲಂಕಾರಿಕ ಮೀನು ಮುಂತಾದವು ಲಕ್ಷಾಂತರ ರೈತರನ್ನು ಹಾಗೂ ಭಕ್ತಾದಿಗಳನ್ನು ಆಕರ್ಷಿಸಿದವು.

ಕೃಷಿಮೇಳದಲ್ಲಿ ಭಾಗವಹಿಸಿದ ಅನೇಕ ರೈತರು ಬಿತ್ತನೆ ಬೀಜಗಳು, ತಳಿಗಳು ಹಾಗೂ ಸಸ್ಯ ಸಂರಕ್ಷಣೆ ಕುರಿತು ಕೃಷಿ ವಿಜ್ಞಾನ ಕೇಂದ್ರದ ತಜ್ಞರಿಂದ ಮಾಹಿತಿ–ಮಾರ್ಗದರ್ಶನ ಪಡೆದರು. ಪ್ರತಿ ಬೆಳೆಗಳ ಮಾಹಿತಿ ಪತ್ರವನ್ನು ಸಿದ್ಧಪಡಿಸಿ ಆಸಕ್ತ ರೈತರಿಗೆ ನೀಡಲಾಯಿತು. ಸಮೃದ್ಧವಾಗಿ ಬೆಳೆದ ಹೂವುಗಳನ್ನು ನೋಡಿ ಅವುಗಳ ಬಿತ್ತನೆ ಬೀಜಗಳನ್ನು ಕೇಳುವುದು ಪ್ರತಿ ಸಲದಂತೆ ಈ ವರ್ಷವೂ ಸಾಮಾನ್ಯವಾಗಿತ್ತು.

ಕೃಷಿ ವಸ್ತುಪ್ರದರ್ಶನದಲ್ಲಿ ಒಟ್ಟು 120 ಮಳಿಗೆಗಳಲ್ಲಿ 86 ವಿವಿಧ ಸಂಘ ಸಂಸ್ಥೆಗಳು ಬಿತ್ತನೆ ಬೀಜಗಳು, ಬೆಳೆಗಳು, ತಳಿಗಳು, ರಸಗೊಬ್ಬರಗಳು, ಸಸ್ಯಸಂರಕ್ಷಣೆ ರಾಸಾಯನಿಕಗಳು, ಸಾವಯವ ಗೊಬ್ಬರಗಳು, ಉತ್ಪನ್ನಗಳು ಹಾಗೂ ಮಾರುಕಟ್ಟೆ ಕುರಿತ ಮಾಹಿತಿ ಒದಗಿಸಿದವು ಮತ್ತು ಕೃಷಿ ಯಂತ್ರೋಪಕರಣಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಿಶ್ವವಿದ್ಯಾಲಯ, ಕೃಷಿ, ತೋಟಗಾರಿಕೆ, ರೇಷ್ಮೆ, ಹಾಗೂ ಪಶುಪಾಲನೆ ಇಲಾಖೆಗಳು, ಜಿಲ್ಲಾ ಪಂಚಾಯತ್, ಖಾಸಗಿ ಸಂಸ್ಥೆಗಳು, ಸ್ವಸಹಾಯ ಸಂಘಗಳು ಕೃಷಿ ವಸ್ತುಪ್ರದರ್ಶನದಲ್ಲಿ ಭಾಗವಹಿಸಿದ್ದರು.

ದಿನಾಂಕ 04.02.2019ರ ಸೋಮವಾರದಂದು ಏರ್ಪಡಿಸಲಾದ 'ರೈತರ ಆದಾಯ ದ್ವಿಗುಣ' ವಿಚಾರಸಂಕಿರಣದಲ್ಲಿ ಕನಕಪುರ ದೇಗುಲಮಠದ ಡಾ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರು ಶುಭಸಂದೇಶ ನೀಡಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಮಾತನಾಡಿ ಅಧುನಿಕ ಕೃಷಿಯಲ್ಲಿ ಕೃಷಿವೆಚ್ಚ ಹೆಚ್ಚಾಗಿದ್ದು, ಹೆಚ್ಚು ರಾಸಾಯನಿಕಗಳನ್ನು ಬಳಸುತ್ತಿದ್ದೇವೆ, ಇದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುವುದರ ಜೊತೆಗೆ ರೈತರ ಆರೋಗ್ಯವೂ ಸಂಕಷ್ಟಕೀಡಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಗತಿಪರ ರೈತರಾದ ಶ್ರೀ ಚಿನ್ನಸ್ವಾಮಿ ವಡ್ಡಗೆರೆ ಮಾತನಾಡಿ ರೈತರು ತಮ್ಮ ಪಾರಂಪರಿಕ ಜ್ಞಾನವನ್ನು ಬಳಸಿಕೊಂಡು ಕೃಷಿ ಮಾಡಬೇಕು. ರೈತರು ಅಭಿವೃದ್ಧಿಯಾಗದೆ ದೇಶ ಅಭಿವೃದ್ಧಿಯಾಗದು ಎಂದು ತಿಳಿಸಿದರು. ಮತ್ತೋರ್ವ ಪ್ರಗತಿಪರ ರೈತರಾದ ಶ್ರೀ ವಿ. ಕಾಂತರಾಜುರವರು ಮಾತನಾಡಿ ರಾಸಾಯನಿಕ ಗೊಬ್ಬರಗಳನ್ನು ತ್ಯಜಿಸಿ ಸಾವಯವ, ಎರೆಹುಳು ಹಾಗೂ ಕೊಟ್ಟಿಗೆ ಗೊಬ್ಬರಗಳನ್ನು ಬಳಸಿ ಉತ್ತಮ ಬೆಳೆ ಬೆಳೆಯುವಂತೆ ರೈತರಿಗೆ ಕಿವಿಮಾತು ಹೇಳಿದರು.

ಕೃಷಿ ವಿಚಾರಸಂಕಿರಣದ ಸಮಾರೋಪ ಸಮಾರಂಭದಲ್ಲಿ ಉಡುಪಿಯ ಪೇಜಾವರ ಶ್ರೀಗಳವರು ಆಶೀರ್ವಚನ ನೀಡಿದರು ಮತ್ತು ಶಿವಮೊಗ್ಗ ಶ್ರೀ ಬಸವಕೇಂದ್ರದ ಶ್ರೀ ಬಸವಮರುಳಸಿದ್ಧ ಸ್ವಾಮಿಜಿಯವರು ಶುಭಸಂದೇಶ ನೀಡಿದರು.

ಪ್ರಗತಿಪರ ರೈತಮಹಿಳೆಯಾದ ಶ್ರೀಮತಿ ಕವಿತಾ ಮಿಶ್ರಾ ರವರು ಮಾತನಾಡಿ ಶ್ರೀಗಂಧದ ಬೆಳೆಯನ್ನು ಬೆಳೆಯಲು ರೈತರಿಗೆ ಪ್ರೇರೇಪಿಸಿದರು. ಪ್ರಗತಿಪರ ರೈತರುಗಳಾದ ವಿಜಯಪುರ ಜಿಲ್ಲೆಯ ಶ್ರೀ ಎಸ್.ಟಿ. ಪಾಟೀಲ್, ಗದಗ ಜಿಲ್ಲೆಯ ಶ್ರೀ ಬಸವರಾಜ್ ನಾವಿ ಮತ್ತು ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿಪುರದ ಶ್ರೀ ಶಿವಕುಮಾರ್ ರವರುಗಳು ಮಾತನಾಡಿ ಸಾಲಮನ್ನಕ್ಕೆ ಕೈಚಾಚದೆ ರೈತರು ಸ್ವಾವಲಂಬಿಯಾಗಿ ಬದುಕನ್ನು ರೂಪಿಸಿಕೊಳ್ಳಬೇಕೆಂದು ಕರೆನೀಡಿದರು.

ಬೆಂಗಳೂರಿನ ಐಸಿಎಆರ್‌ನ ನಿರ್ದೇಶಕರಾದ ಡಾ. ಎಂ.ಜೆ. ಚಂದ್ರೇಗೌಡರವರು ಕೆವಿಕೆಯ 'ಅಗ್ರಿಕ್ಲಿನಿಕ್' ಸೇವೆಯನ್ನು ಶ್ಲಾಘಿಸುತ್ತಾ ರೈತರು ವಿಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡರೆ ಯಶಸ್ವಿ ಕೃಷಿಕರಾಗಬಹುದೆಂದರು.

ಯುನೆಸ್ಕೋದ ಶ್ರೀ ನಟರಾಜನ್ ಈಶ್ವರನ್‌ರವರು ಮಾತನಾಡಿ ಹವಾಮಾನ ವೈಪರಿತ್ಯದಿಂದಾಗಿ ಸಕಾಲದಲ್ಲಿ ಮಳೆ ಬಾರದೆ ಬರಗಾಲ ಪರಿಸ್ಥಿತಿಯುಂಟಾಗಿದೆ. ಅಲ್ಲದೆ, ಅರಣ್ಯ ಒತ್ತುವರಿಯಿಂದ ಕಾಡು ಪ್ರಾಣಿಗಳ ಹಾವಳಿಯು ಬೆಳೆಗೆ ನಷ್ಟವನ್ನುಂಟುಮಾಡುತ್ತಿದೆ ಎಂದು ತಿಳಿಸಿದರು.

ಅಲ್ಲದೇ, ದಿನಾಂಕ 05.02.2019 ರಂದು ಸಿರಿಧಾನ್ಯ ಅಡುಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಒಟ್ಟು 13 ಮಹಿಳೆಯರು ಭಾಗವಹಿಸಿ ವಿವಿಧ ಸಿರಿಧಾನ್ಯದ ಪಾಕಗಳನ್ನು ಪ್ರಸ್ತುತಪಡಿಸಿದರು.

ಕೃಷಿಮೇಳವನ್ನು ಯಶಸ್ವಿಯಾಗಿ ಏರ್ಪಡಿಸಲು ಆಶೀರ್ವದಿಸಿದ ಪರಮಪೂಜ್ಯ ಜಗದ್ಗುರುಗಳವರಿಗೆ ಕೃಷಿ ವಿಜ್ಞಾನ ಕೇಂದ್ರದ ಸಮಸ್ತ ಸಿಬ್ಬಂದಿಯವರ ಪರವಾಗಿ ಭಕ್ತಿಪೂರ್ವಕ ಕೃತಜ್ಞತೆಗಳು. ಮಾರ್ಗದರ್ಶನ ನೀಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿವಾಹಕ ಕಾರ್ಯದರ್ಶಿಯವರು, ಕಾರ್ಯದರ್ಶಿಗಳವರು, ಗ್ರಾಮೀಣಾಭಿವೃದ್ಧಿ ವಿಭಾಗ ಹಾಗೂ ತೋಟಗಾರಿಕೆ ನಿರ್ದೇಶಕರಿಗೆ ಹೃದಯಪೂರ್ವಕ ಧನ್ಯವಾದಗಳು. ನಿರಂತರ ಬೆಂಬಲ ಹಾಗೂ ಪ್ರೋತ್ಸಾಹ ನೀಡಿದ ಜಾತ್ರಾಮಹೋತ್ಸವ ಸಮಿತಿಯ ಕಾರ್ಯದರ್ಶಿಗಳು, ಸಮಿತಿಯ ಸದಸ್ಯರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಹಿರಿಯ ಅಧಿಕಾರಿಗಳು ಹಾಗೂ ಸ್ವಯಂ ಸೇವಕರುಗಳಿಗೆ ಅನಂತ ಧನ್ಯವಾದಗಳು. ಮೈಸೂರು ಜೆಎಸ್‌ಎಸ್ ವಿಜ್ಞಾನ ಕಾಲೇಜಿನ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ರೈತರಿಗೆ ಮಾರ್ಗದರ್ಶನ ನೀಡಲು ಸಹಕರಿಸಿದರು. ಸ್ವಯಂಸೇವಕರುಗಳಿಗೂ ಹಾಗೂ ಅವರ ಅಧ್ಯಾಪಕವೃಂದವರೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಕೃಷಿಮೇಳದ ಪ್ರಾಯೋಜಕರಾದ ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು, ರಾಷ್ಟ್ರೀಯ ತೋಟಗಾರಿಕೆ ಮಿಷನ್, ಬೆಂಗಳೂರು, ಕೃಷಿ ಇಲಾಖೆಯ ಆತ್ಮ ಹಾಗೂ ಐಸಿಎಆರ್–ಅಟಾರಿ, ಬೆಂಗಳೂರು ಇವರಿಗೆ ಹೃತ್ಪೂರ್ವಕ ಧನ್ಯವಾದಗಳು. ಕೃಷಿಮೇಳಕ್ಕೆ ಉತ್ತಮ ಪ್ರಚಾರ ಒದಗಿಸಿದ ಮಾಧ್ಯಮ ಪ್ರತಿನಿಧಿಗಳಿಗೆ ವಿಶೇಷ ಧನ್ಯವಾದಗಳು.